

# ಬೀಟ್ ಗುರುಸ್ ಇದು ರಿದಮ್ ಚಮತ್ಕಾರ!

**ದಕ್ಷಿಣ ಆಫ್ರಿಕಾ ಮೂಲದ ಡಿಜೆಂಬೆ ಎಂಬ ವಾದ್ಯವನ್ನು ಬೆಂಗಳೂರಿನ ಯುವಕರ ತಂಡ 'ಬೀಟ್ ಗುರುಸ್' ಜನಪ್ರಿಯಗೊಳಿಸುತ್ತಿದೆ. ಈ ಸಂಗೀತಗಾರರ ತಂಡ ದೇಶವಿದೇಶಗಳಲ್ಲಿ ಭಾರತೀಯ ಲಯ ನಾದದ ಹೊನಲನ್ನು ಹರಿಸಿ ಯುವಜನರ ಮನಸ್ಸನ್ನು ತಟ್ಟುತ್ತಿದೆ.**

■ ಉಮಾ ಅನಂತ್

ಈ ವಾದ್ಯದ ಹೆಸರು ಡಿಜೆಂಬೆ. ಲಯ, ನಾದವೆಲ್ಲ ನಮ್ಮ ಹಿಂದೂಸ್ತಾನಿ ಸಂಗೀತದ ಪ್ರಮುಖ ಸಾಥಿವಾದ್ಯ ತಬಲಾದಂತೆಯೇ. ಕೇಳಲು ಬಹಳ ಆಪ್ಯಾಯಮಾನ. ಬೋಲ್‌ಗಳು, ಠೇಕಾಗಳನ್ನು ಕೇಳಿಸಿಕೊಂಡರೆ ಮನಸ್ಸು ಹಾಗೇ ಕರಗುತ್ತದೆ. ನಾದದಲೆಯಲ್ಲಿ ತೇಲಿಹೋದಂತಹ ಅನುಭವ. ಇದು ದಕ್ಷಿಣ ಆಫ್ರಿಕಾ ಮೂಲದ ವಾದ್ಯ. ಇದೀಗ ಭಾರತೀಯ ಸಂಗೀತವನ್ನು ಒಗ್ಗಿಸಿಕೊಂಡು ರಿದಂ ಸಾಥಿ ನೀಡುತ್ತಿದ್ದು, ವಿಶಿಷ್ಟ ಸದ್ದು ಮಾಡುತ್ತಿದೆ.

ಈ ಚರ್ಮ ವಾದ್ಯವನ್ನು ನಮ್ಮ ನೆಲಕ್ಕೆ ತಂದು ಪರಿಚಯಿಸಿದವರು ಡಿಜೆಂಬೆ ವಾದಕ ಬೆಂಗಳೂರಿನ ಗಣೇಶ್ ಗೋವಿಂದಸ್ವಾಮಿ ಅವರು. ಅಲ್ಲದೆ ಬೆಂಗಳೂರಿನ ಸಮಾನ ಮನಸ್ಕ ಲಯವಾದ್ಯಗಾರರ ತಂಡ 'ಬೀಟ್ ಗುರುಸ್' ಚಾಲಕಶಕ್ತಿ. 2008ರಲ್ಲಿ ರೂಪುಗೊಂಡ ಈ ತಂಡ ಈವರೆಗೆ ದೇಶ ವಿದೇಶಗಳಲ್ಲಿ ಡಿಜೆಂಬೆ ವಾದ್ಯದ ಕಂಪು ಹರಡಿದೆ, ಸಾವಿರಕ್ಕೂ ಹೆಚ್ಚು ಕಛೇರಿಗಳನ್ನು ನೀಡಿದೆ.

ಡಿಜೆಂಬೆ ಚರ್ಮ ವಾದ್ಯ. ಇದರ ನಾದವನ್ನು ಆಲಿಸಿದ ಗಣೇಶ್ ಗೋವಿಂದಸ್ವಾಮಿ ಇದರಲ್ಲಿ ಹೆಚ್ಚು ಪ್ರಯೋಗ ಮಾಡಲು ಶುರು ಮಾಡಿದರು. ಮನೆಯಲ್ಲಿ ಸಂಗೀತದ ಹಿನ್ನೆಲೆ ಇತ್ತು. ಖಂಜೀರ ವಾದಕರಾಗಿದ್ದ ತಾತನಿಂದ ಲಯವಾದ್ಯ ನುಡಿಸಾಣಿಕೆ ತಂತ್ರಗಳನ್ನು ಕಲಿತರು. ಇದು ಇವರಿಗೆ 'ಡಿಜೆಂಬೆ'ಯಲ್ಲಿ ತಾಳಗಳ ನುಡಿಸಾಣಿಕೆಗೆ ಸಹಾಯವಾಯಿತು.

'ಬೀಟ್ ಗುರುಸ್' ತಂಡ ಬೆಂಗಳೂರಿನ ಜಯನಗರದಲ್ಲಿ ಮೊದಲಿಗೆ ಲಯಲಾಸ್ಯ ಕಛೇರಿ ನೀಡಿತು. ಈ ತಂಡದಲ್ಲಿ ಸದ್ಯ ಏಳು ಕಲಾವಿದರಿದ್ದಾರೆ. ಇವರಲ್ಲಿ ಗಣೇಶ್ ಗೋವಿಂದಸ್ವಾಮಿ, ಪ್ರಶಾಂತ ಮುರಳೀಧರ್ ಹಾಗೂ ಆದರ್ಶ ಪಿ.ಬಿ. ಡಿಜೆಂಬೆ ನುಡಿಸುತ್ತಾರೆ. ಪ್ರಸಾದ್ ಜಿ. ಟ್ಯಾಂಬೊರಿನ್ ಹಾಗೂ ಸಿಂಬಲ್ಸ್ ಸಹಕಾರ ನೀಡುತ್ತಾರೆ. ಅರ್ಜುನ್ ಎಂ.ಪಿ. ಕೊಳಲು, ಗಣೇಶ ನಾಯಕ್ ಡರ್ಬುಕ ಎಂಬ ವಾದ್ಯ ನುಡಿಸುತ್ತಾರೆ. ಹೆಚ್ಚಾಗಿ 'ಲಯ ತರಂಗ'